ಸಿ. ಸಿ. ನಂ. **1598/2018**

ಪಿ. ಡಬ್ಲ್ಯೂಃ **1**

**ಸಾಕ್ಷಿಯು ದಿನಾಂಕಃ 21-11-2023 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಇ ವಿ ಎ ಜಿ ವಕೀಲರಿಂದ</u>**

ನಾನು ಶಿಕ್ಷಕನಾಗಿ **23** ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಕುಣಿಗಲ್ ಮತ್ತು ಕಂಪ್ಲಿಯಲ್ಲಿ ಶಿಕ್ಷಕನಾಗಿ ಕೆಲಸ ಮಾಡಿದ್ದೇನೆ. ನನಗೆ ಈಗ ತಿಂಗಳಿಗೆ ರೂ. **60,000/-** ಸಂಬಳ ಇದೆ. ನಮ್ಮ ಮನೆಯಲ್ಲಿ **4** ಜನ ವಾಸವಿದ್ದೇವೆ. ಎಲ್ಲರೂ ನನ್ನ ಆದಾಯದ ಮೇಲೆ ಅವಲಂಭಿಸಿದ್ದಾರೆ. ನನ್ನ ಸಂಬಳದಲ್ಲಿ ಎಲ್ಲ ಕಡಿತವಾಗಿ ರೂ. **60,000/-** ಸಂಬಳ ಉಳಿಯುತ್ತದೆ.

ನನ್ನ ಸಂಬಳದಲ್ಲಿ ಎಲ್ಲ ಕಡಿತವಾಗಿ ರೂ. **60,000/-** ಸಂಬಳ ಉಳಿಯುತ್ತದೆ ಅಂತಾ ನನ್ನ ದೂರಿನಲ್ಲಿ ಬರೆಸಿಲ್ಲ. ನಾನು ಸರ್ಕಾರಿ ಶಿಕ್ಷಕ. ಸಂಬಳ ಬಿಟ್ಟು ನನಗೆ ಬೇರೆ ಯಾವುದೇ ಆದಾಯ ಇಲ್ಲ.

ಆರೋಪಿ ನನಗೆ **18** ವರ್ಷಗಳಿಂದ ಪರಿಚಯ. ಆರೋಪಿ ಮೊದಲು ತುಮಕೂರಿನ ಕ್ಯಾತಸಂದ್ರದಲ್ಲಿ ವಾಸ ಇದ್ದರು. ನಂತರ ಈಗ ಕುಣಿಗಲ್ ತಾಲ್ಲೂಕು ಹುಲಿಯೂರು ದುರ್ಗದಲ್ಲಿ ವಾಸ ಇದ್ದಾರೆ. ಆರೋಪಿ ಸಹ ಸರ್ಕಾರಿ ಶಿಕ್ಷಕ ಅಂದರೆ ಸರಿ. ಆರೋಪಿ ಮತ್ತು ನನ್ನ ನಡುವೆ ಮೊದಲಿನಿಂದಲೂ ಲೇವಾದೇವಿ ಹಣದ ವ್ಯವಹಾರ ಇತ್ತು.

ಆರೋಪಿಗೆ ನನ್ನ ಸಂಬಳದಲ್ಲಿ ಸಾಲ ಮಾಡಿ ಆತನಿಗೆ ಹಣವನ್ನು ನೀಡಿದ್ದೇನೆ. ಆರೋಪಿ ಆತನಿಗೆ ಮನೆಯಲ್ಲಿ ತೊಂದರೆ ಇದೆ ಮತ್ತು ಬೇರೆಯವರಿಗೆ ಹಣ ಕೊಡುವುದಿದೆ ಅಂತಾ ತಿಳಿಸಿದರು. ಈ ವ್ಯವಹಾರದ ಬಗ್ಗೆ ಆರೋಪಿಯ ಕುಟುಂಬದವರಿಗೆ ತಿಳಿಸಿದ್ದೇನೆ. ಅವರಿಗೂ ಸಹ ಗೊತ್ತು.

ಸಿ. ಸಿ. ನಂ. **1598/2018**

**ಪಿ. ಡಬ್ಲ್ಯೂ: 1**

ಈ ವ್ಯವಹಾರದ ಬಗ್ಗೆ ಆರೋಪಿಯ ಕುಟುಂಬದವರಿಗೆ ತಿಳಿಸಿದ್ದೇನೆ ಎಂದು ನನ್ನ ದೂರಿನಲ್ಲಿ ಬರೆಸಿಲ್ಲ. ಆರೋಪಿಗೆ ನಾನು ಸಂಬಳದಿಂದ ಸಾಲ ಪಡೆದು ಆತನಿಗೆ ನೀಡಿದ್ದೇನೆಂದು ಅಕೌಂಟ್ ಸ್ಟೇಟ್ ಮೆಂಟ್ ಸಲ್ಲಿಸಿಲ್ಲ. ಆದರೆ, ನನ್ನ ಬ್ಯಾಂಕ್ ಪಾಸ್ ಬುಕ್ ನ ಝುರಾಕ್ಸ ಪ್ರತಿಯನ್ನು ಸಲ್ಲಿಸಿದ್ದೇನೆ.

ಆರೋಪಿಗೆ ನಾನು ಸಂಬಳದಿಂದ ಸಾಲ ಪಡೆದು ಆತನಿಗೆ ನೀಡಿದ್ದೇನೆಂದು ದೂರಿನಲ್ಲಿ ತಿಳಿಸಿಲ್ಲ. ಆರೋಪಿಗೆ ನಗದಾಗಿ ಹಣ ನೀಡಿದ್ದೇನೆ. ಆರೋಪಿಗೆ ಹಣ ನೀಡುವಾಗ ಆತನ ಜೊತೆಗೆ ಯಾರು ಇರಲಿಲ್ಲ. ಎಲ್ಲ ರೂ. 500/- ಮುಖ ಬೆಲೆಯ ನೋಟುಗಳು ಆಗಿದ್ದವು.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.